ಆ) ರೂ. 2,30,31,100

1)	ಭಟ್ಕಳ	ರೂ. 17,66,580
2)	ದಾಂಡೇಲಿ	ರೂ. 87,80,490
3)	ಕುಮಟಾ	ರೂ. 28,92,470
4)	ಕಾರವಾರ	ರೂ. 43,34,900
5)	ಶಿರ್ಶಿ	ರೂ. 52,56,660

ಆ) 1) ರಬಕವಿ-ಬನಹಟ್ಟಿ ರೂ. 4.00 ಲಕ್ಷ

2) ಬೀದರ್ ರೂ. 20.00 ಲಕ್ಷ

ಇ) ನಗರಸಭೆಗಳ ಅಭಿವೃದ್ಧಿ ಕಾರ್ಯಗಳ ಅವಶ್ಯಕತೆ ಮತ್ತು ಕೋರಿಕೆ ಹಾಗೂ ಸರ್ಕಾರದಲ್ಲಿ ಹಣಕಾಸಿನ ಸಂಪನ್ಮೂಲಗಳ ಲಭ್ಯತೆಯಯನ್ನು ಪರಿಗಣಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಹಿಂದುಳಿದ ವರ್ಗಗಳಿಗೆ ಮೀಸಲಾತಿ (ವೃತ್ತಿ ಶಿಕ್ಷಣ ಪ್ರವೇಶಕ್ಕಾಗಿ) ಯನ್ನು ನೀಡುವಾಗ ನಿಗಧಿಪಡಿಸಿರುವ ಆದಾಯ ಮಿತಿಯಲ್ಲಿ ಹೆಚ್ಚಳ.

817 - ಶ್ರೀ ಕುಂಬೈ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾಂತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹಿಂದುಳಿದ ವರ್ಗಗಳಿಗೆ ವೃತ್ತಿ ಶಿಕ್ಷಣ ಪ್ರವೇಶದಲ್ಲಿ ನೀಡಿರುವ ಮೀಸಲಾತಿಯಲ್ಲಿ ನಿಗಧಿಪಡಿಸಿರುವ ಆದಾಯ ಮಿತಿಯ ಮೊತ್ತವೆಷ್ಟು? ಅದು ಈಗಿನ ಆರ್ಥಿಕ ಏರಿಕೆಗೆ ಸೂಕ್ತವಾಗಿದೆಯೇ?

ಆ) ಇತರ ರಾಜ್ಯಗಳಲ್ಲಿ ಹಾಗೂ ಕೇಂದ್ರ ಸರ್ಕಾರದವರು ಹಿಂದುಳಿದ ವರ್ಗಗಳಿಗೆ ನಿಗಧಿಪಡಿಸಲಾಗಿರುವ ಆದಾಯ ಮಿತಿಯ ಮೊತ್ತವೆಷ್ಟು?

ಇ) ಪ್ರಸ್ತುತ ನಿಗಧಿಪಡಿಸಿರುವ ಆದಾಯ ಮಿತಿಯು ಸರ್ಕಾರಿ ಹಾಗೂ ಇತರ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಕ್ಲಾಸ್'ಡಿ' ಹಾಗೂ 'ಸಿ' ಗುಂಪಿನ ನೌಕರರಿಗೂ ಅನ್ವಯಿಸುವಂತೆ ಅವರು ಇನ್‌ಕಂಟ್ಯಾಕ್ಸ್ ಅಸೆಸ್ಸಿ (ನಿರ್ಧರಣೆ)ಗಳಾಗಿದ್ದಲ್ಲಿ ಮೀಸಲಾತಿಯು ಸೌಲಭ್ಯದಿಂದ ವಂಚಿತರಾಗಿರುವುದನ್ನು ಸರ್ಕಾರವು ಲಕ್ಷಿಸಿಲ್ಲವೆ. ಲಕ್ಷಿಸಿದ್ದಲ್ಲಿ ಅಂತ 'ಡಿ' ಹಾಗೂ 'ಸಿ' ಗುಂಪಿನ ಜನರು ಮೀಸಲಾತಿಯ ಲಾಭವನ್ನು ಪಡೆದುಕೊಳ್ಳಲು ಆದಾಯಮಿತಿಯನ್ನು ಹೆಚ್ಚಿಸಲು ಸರ್ಕಾರವು ಕ್ರಮ ಜರುಗಿಸುವುದೇ?

ಈ) ಹಿಂದೆ ಜಾರಿಯಲ್ಲಿದ್ದ ಸರ್ಕಾರಿ ಆದೇಶಗಳಂತೆ ಇನ್‌ಕಂಟ್ಯಾಕ್ಸ್ ಪಾವತಿದಾರ ಎನ್ನುವ ನಿಯಮವನ್ನು ಅನುಸರಿಸಿ ಇನ್‌ಕಂಟ್ಯಾಕ್ಸ್ ನಿರ್ಧರಣೆಗೆ ಒಳಪಡುವವರು ಎನ್ನುವ

ಶಬ್ದವನ್ನಾದರೂ ಕೈಬಿಟ್ಟು ಬಡ ಹಾಗೂ 'ಡಿ' ಮತ್ತು 'ಸಿ' ಗುಂಪಿನ ನೌಕರರಿಗೆ ಅನುಕೂಲ ಮಾಡಲು ಸರ್ಕಾರವು ಮುಂದಾಗುವುದೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :

ಅ) ಪ್ರವರ್ಗ-1ಕ್ಕೆ ಸಂಬಂಧಿಸಿದಂತೆ ಯಾವುದೇ ಆದಾಯ ಮಿತಿ ಇರುವುದಿಲ್ಲ. ಆದರೆ ಇತರೇ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ" ಕ್ರಿಮಿಲೇಯರತತ್ವ" ವನ್ನು ಅಳವಡಿಸಲಾಗಿದೆ. ಅದು ಈಗಿನ ಆರ್ಥಿಕ ಏರಿಕೆಗೆ ಅನುಗುಣವಾಗಿರುತ್ತದೆ.

ಆ) ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಮೀಸಲಾತಿಯು ಉದ್ಯೋಗದಲ್ಲಿನೇಮಕಾತಿಗೆ ಮಾತ್ರ ಅನ್ವಯವಾಗುತ್ತಿದ್ದು ಆದಾಯ ಮಿತಿಯನ್ನು ರೂ. 1.00 ಲಕ್ಷಕ್ಕೆ ನಿಗಧಿಪಡಿಸಲಾಗಿದೆ. ಇತರ ರಾಜ್ಯಗಳಲ್ಲಿ ಮೀಸಲಾತಿ ಪಡೆಯಲು ನಿಗಧಿಪಡಿಸಿರುವ ಆದಾಯ ಮಿತಿಯ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಇ) ಮೀಸಲಾತಿಯ ಅರ್ಹತೆಗೆ ವ್ಯಕ್ತಿಗಳು ಆದಾಯ ತೆರಿಗೆ ನಿರ್ಧರಣೆಗೆ ಒಳಪಟ್ಟಿರುವರೇ ಇಲ್ಲವೇ ಎಂಬುದು ಮಾನದಂಡವೇ ಹೊರತು ವ್ಯಕ್ತಿಗಳ ಸರ್ಕಾರಿ ನೌಕರಿಯ ದರ್ಜೆಯು ಮಾನದಂಡವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಯಾವ ಕ್ರಮದ ಅಗತ್ಯ ಇರುವುದಿಲ್ಲ.

ಈ) ಪ್ರಶ್ನೆ (ಇ) ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ನೇಕಾರರ ಸಹಕಾರ ಸಂಘಗಳಿಗೆ (ಎಂ.ಡಿ.ಎ) ಮಾರುಕಟ್ಟೆ ಅಭಿವೃದ್ಧಿ ಯೋಜನೆ

818 - ಶ್ರೀ ಕುಂಭೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95 ಮತ್ತು 1995-96 ನೇ ಸಾಲಿನಲ್ಲಿ ರಾಜ್ಯದಲ್ಲಿನ ನೇಕಾರರ ಸಹಕಾರ ಸಂಘಗಳಿಗೆ ಕೊಡುವ ಎಂ.ಡಿ.ಎ. ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿದೆಯೇ? ಇಲ್ಲವಾದಲ್ಲಿ ಅದರ ಮೊತ್ತವೆಷ್ಟು? ಹಾಗೂ ಬಿಡುಗಡೆ ಮಾಡದಿರಲು ಕಾರಣವೇನು?

ಆ) ಎಂ.ಡಿ.ಎ. ಹಣವನ್ನು ಸರ್ಕಾರವು ಬಿಡುಗಡೆ ಮಾಡದೇ ಇರುವುದರಿಂದ ಸಹಕಾರ ಸಂಘಗಳು ತೊಂದರೆಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಇ) ವಿವಿಧ ಕಾರಣಗಳಿಂದ ಕ್ಷೀಣಿಸುತ್ತಿರುವ ನೇಕಾರ ಸಹಕಾರ ಸಂಘಗಳಿಗೆ ಇಂತಹ ತೊಂದರೆಗಳಿಂದ ರಕ್ಷಿಸಲು ಸೂಕ್ತ ಹಾಗೂ ಸಕಾಲಿಕ ಕ್ರಮವನ್ನು ಸರ್ಕಾರದವರು ಜರುಗಿಸುವರೇ?

ಶ್ರೀ ಎಂ.ಎಸ್. ಪಟೇಲ್ (ಜವಳಿ ಸಚಿವರು) :

ಅ) ರಾಜ್ಯ ಸರ್ಕಾರದ ಪಾಲನ್ನು ಪೂರ್ಣ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಪಾಲಿನ ಹಣ ಇತ್ತೀಚೆಗೆ ಬಂದಿದ್ದು, ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.